



## ಒಮ್ಮೆ ಊಹಿಸಿಕೊಳ್ಳಿ:

ನೀವು ರೈತ. ನಿಮ್ಮ ಎಕರೆಗಟ್ಟಲೆ ವಿಸ್ತೀರ್ಣದ ಹೊಲ– ತೋಟದಲ್ಲಿ ಬೆಳೆದು ನಿಂತ ಫಸಲಿಗೆ ಯಾವುದೋ ರೋಗವೋ ಅಥವಾ ಕೀಟವೋ ದಾಳಿಯಿಟ್ಟಿದೆ. ಕೊಯ್ಲಿಗೆ ಬಂದಿರುವ ಫಸಲನ್ನು ಉಳಿಸಿಕೊಳ್ಳಬೇಕೆಂದರೆ ಔಷಧಿ ಹೊಡೆಯಲೇ ಬೇಕು. ಔಷಧ ಖರೀದಿಸಲು, ಔಷಧಿ ಸಿಂಪಡನೆ ಯಂತ್ರದ ಖರ್ಚು, ಕೂಲಿಯಾಳಿನ ಖರ್ಚು... ಹೀಗೆ ಖರ್ಚಿನ ಬಾಬತ್ತು ಒಂದೆಡೆಯಾದರೆ, ಅಗತ್ಯ ಸಂದರ್ಭದಲ್ಲಿ ಕೂಲಿಗಳು ಸಿಗದೇ ಇರುವುದೂ ದೊಡ್ಡ ತಲೆನೋವು. ಸಣ್ಣ ಹಿಡುವಳಿಯಾದರೆ ಮನೆಯಾಳುಗಳೇ ನಿಂತು ಔಷಧಿ ಹೊಡೆಯಬಹುದು. ದೊಡ್ಡ ಹೊಲ– ತೋಟಗಳಿದ್ದರೆ ಔಷಧಿ ಹೊಡೆಯುವಷ್ಟರಲ್ಲಿ ಫಸಲಿನ ನಷ್ಟ ಮತ್ತಷ್ಟು ಹೆಚ್ಚಿರುತ್ತದೆ. ಹೀಗಿದ್ದಾಗ ಗಾಳಿಯಲ್ಲಿ ಹಾರಾಡುತ್ತಾ, ಬೆಳೆಗೆಲ್ಲಾ ಔಷಧಿ ಸಿಂಪಡಿಸುವ ಯಂತ್ರವೊಂದಿದ್ದರೆ ಕೆಲಸ ಎಷ್ಟು ಸುಲಭವಾಗಬಹುದು. ನೀವು ಕುಳಿತಲ್ಲಿಂದಲ್ಲೇ ಆ ಯಂತ್ರದ ಚಲನೆಯ ದಿಕ್ಕು, ಹಾರಾಟದ ಎತ್ತರ, ವೇಗ ಎಲ್ಲವನ್ನೂ ನಿಯಂತ್ರಿಸುವಂತಿದ್ದರೆ, ಹೊಲದ ಮೂಲೆ–ಮೂಲೆಗೂ ಔಷಧ ಸಿಂಪಡಿಸಬಹುದಲ್ಲವೆ.? ಈ ಕಲ್ಪನೆ ಅತಿರಂಜಕವಾಗಿದೆಯೇ?

ಇಂತಹದ್ದೊಂದು ಕಲ್ಪನೆಯನ್ನು ನಿಜವಾಗಿಸಲು ಕರ್ನಾಟಕದ ಕಂಪನಿಯೊಂದು ಮುಂದಡಿ ಇಟ್ಟಿದೆ. 'ವರ್ಷ ಅಗ್ರಿ ಬ್ಯುಸಿನೆಸ್ ಸೆಂಟರ್ ಫಾರ್ ಡೆವಲಪ್‌ಮೆಂಟ್ ಲಿಮಿಟೆಡ್' ಎಂಬ ಸಂಸ್ಥೆ ಹೊಲಗಳಲ್ಲಿ ಔಷಧ ಸಿಂಪಡಿಸಲು 'ಮಾನವರಹಿತ ಗಗನ ವಾಹನ– ಯುಎವಿ'ಗಳನ್ನು ಬಾಡಿಗೆಗೆ ನೀಡುವ ಸೇವೆ ಆರಂಭಿಸಿದೆ. ಛೇ... ಈ ಮಾನವರಹಿತ ಗಗನ ವಾಹನ ಎಂದು ಹೇಳುವುದೇ ದೊಡ್ಡ ಕಿರಿಕಿರಿ ಎನಿಸುತ್ತಿದೆ. ಹೀಗಾಗಿ ಎಲ್ಲರೂ ಕರೆಯುವಂತೆ ಇದನ್ನು 'ಡ್ರೋಣ್' ಎಂದೇ ಕರೆಯೋಣ. ಹೌದು ಈ ಕಂಪನಿ ಔಷಧ ಸಿಂಪಡಿಸಲು ಡ್ರೋಣ್‌ಗಳನ್ನು ಬಾಡಿಗೆಗೆ ನೀಡುತ್ತದೆ. ಸದ್ಯ ಕರ್ನಾಟಕದ 10 ಜಿಲ್ಲೆಗಳಲ್ಲಿರುವ 66 'ಕೃಷಿ ಯಂತ್ರ ಧಾರೆ ಕೇಂದ್ರ'ಗಳಲ್ಲಿ ಈ ಡ್ರೋಣ್‌ಗಳು ಬಾಡಿಗೆಗೆ ಲಭ್ಯವಿದೆ.



ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿ ಬಾಡಿಗೆಗೆ ನೀಡುವ ಉದ್ದೇಶದಿಂದ ಕರ್ನಾಟಕ ಸರ್ಕಾರ ಆರಂಭಿಸಿದ ಯೋಜನೆ ಇದು. ಸರ್ಕಾರಿ– ಖಾಸಗಿ ಸಹಭಾಗಿತ್ವದ ಈ ಯೋಜನೆ ಕೃಷಿ ಯಂತ್ರ ಧಾರೆ ಕೇಂದ್ರದ ಮೂಲಕ ಅನುಷ್ಠಾನಕ್ಕೆ ಬಂದಿದೆ. ಇಲ್ಲಿ ಸರ್ಕಾರದ ಸಹಾಯಧನ ಇರುವುದರಿಂದ ಕಡಿಮೆ ದರದಲ್ಲಿ ಯಂತ್ರಗಳು ಬಾಡಿಗೆಗೆ ದೊರೆಯುತ್ತವೆ. ಹೀಗಾಗಿ ರೈತರನ್ನು ನೇರವಾಗಿ ಸಂಪರ್ಕಿಸಲು ಅಥವಾ ರೈತರು ನೇರವಾಗಿ ಸಂಪರ್ಕಕ್ಕೆ ಸಿಗುವ ಕಾರಣ ಈ ಕಂಪನಿ ಸಹ ಕೃಷಿ ಯಂತ್ರ ಧಾರೆ ಕೇಂದ್ರಗಳನ್ನು ತನ್ನ ಕಾರ್ಯಸ್ಥಾನಗಳಾಗಿ ಆಯ್ಕೆ ಮಾಡಿಕೊಂಡಿದೆ. ಆದರೆ ಇಲ್ಲಿ ಕಡಿಮೆ ದರದಲ್ಲಿ ಡ್ರೋಣ್‌ಗಳು ಬಾಡಿಗೆಗೆ ಸಿಗುವುದಿಲ್ಲ. ಏಕೆಂದರೆ ಸರ್ಕಾರ ಮಾಡಿರುವ ಕೃಷಿ ಯಂತ್ರೋಪಕರಣಗಳ ಪಟ್ಟಿಯಲ್ಲಿ ಡ್ರೋಣ್ ಇನ್ನೂ ಸ್ಥಾನ ಪಡೆದಿಲ್ಲ.